ದಿನಾಂಕಃ 18.12.2025

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಸ್ ಪಿ ವಕೀಲರಿಂದಃ-</u>**

1. ನಾನು ಮತ್ತು ನನ್ನ ಸೊಸೆ ಅಂದರೆ ಈ ಕೇಸಿನ ಎದುರುದಾರರ ನಡುವೆ ಯಾವುದೇ ಗಲಾಟೆ, ವೈಮನಸ್ಸು ಆಗಿಲ್ಲ. ಸಾಕ್ಷಿ ಮುಂದುವರೆದು ಗಂಡ ಹೆಂಡತಿಗೆ ಬುದ್ದಿ ಹೇಳಿರಬಹುದು, ನಮ್ಮ ಮಧ್ಯೆ ಯಾವುದೇ ಗಲಾಟೆ ಆಗಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮಗ ಸೊಸೆ ಒಂದಾಗಿ ಜೀವನ ಮಾಡಲು ನಿಮ್ಮ ತಕರಾರು ಇಲ್ಲ ಎಂದರೆ ಸಾಕ್ಷಿ ಈಗಲೇ ಇಷ್ಟು ವರ್ಷ ಜಗಳ ಆಗಿದೆ, ಇನ್ನು ಮುಂದೆ ಏನಾಗುತ್ತೊ ಎಂದು ನುಡಿಯುತ್ತಾರೆ.

2. ಮದುವೆ ಮಾತುಕತೆ ಸಮಯದಲ್ಲಿ ನನ್ನ ಮಗ ಮೂಡಿಗೆರೆಯಲ್ಲಿ ಸರ್ಕಾರಿ ನೌಕರಿಯಲ್ಲಿದ್ದು, ಅಲ್ಲೇ ವಸತಿ ಗೃಹದಲ್ಲಿ ವಾಸವಿದ್ದರು ಎಂದರೆ ಸರಿ. ಮದುವೆಯಾದ ಮೇಲೆ ನಿಮ್ಮ ಮಗ ಸೊಸೆ ಮೂಡಿಗೆರೆಯಲ್ಲಿಯೇ ವಾಸ ಇದ್ದರು ಎಂದರೆ ಸಾಕ್ಷಿ ಒಂದುವರೆ ತಿಂಗಳು ನಮ್ಮ ಜೊತೆ ಇದ್ದು ನಂತರ ಬೇರೆ ಮನೆ ಮಾಡಲು ಹೇಳಿದ್ದಾರೆ ಎಂದು ಅಲ್ಲಿ ಮನೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನೂ ಸಹ ಸರ್ಕಾರಿ ನೌಕರನಾಗಿದ್ದೆ ಎಂದರೆ ಸರಿ. ನಾನು ಆ ಸಮಯದಲ್ಲಿ ಸಾಗರದಲ್ಲಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ನಾನು ಅಲ್ಲೇ ರೂಮಿನಲ್ಲಿ ವಾಸ ಇದ್ದೆ ಎಂದರೆ ಸಾಕ್ಷಿ ಇಲ್ಲ, ಶಿವಮೊಗ್ಗಕ್ಕೆ ಬರುತ್ತಿದ್ದೆ ಎಂದು ನುಡಿಯುತ್ತಾರೆ.

3. ಆ ಸಮಯದಲ್ಲಿ ನಾವೇ ಬೇರೆ ವಾಸವಿದ್ದೆವು ಮತ್ತು ನನ್ನ ಮಗ ಸೊಸೆ ಮೂಡಿಗೆರೆಯಲ್ಲಿ ಬೇರೆ ವಾಸವಿದ್ದರು ಎಂದರೆ ಸರಿ. ನಾವು ಯಾವತ್ತೂ ಅವರ ಜೊತೆ ಹೋಗಿ ಮೂಡಿಗೆರೆಯಲ್ಲಿ ವಾಸವಿರಲಿಲ್ಲ. ಆ ಕಾರಣದಿಂದ ಅಲ್ಲಿ ಗಂಡ ಹೆಂಡತಿ ಮಧ್ಯೆ ಏನೇನು ನಡೆದಿದೆ ಎಂಬ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಮಗ

ಕರೆ ಮಾಡಿ ಹೇಳಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ನನ್ನ ಮಗ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾವು ಬೇರೆ ಮತ್ತು ಮಗ ಮತ್ತು ಸೊಸೆ ಬೇರೆ ವಾಸವಿದ್ದ ಕಾರಣ ಪ್ರತ್ಯೇಕ ಮನೆ ಮಾಡಲು ಗಲಾಟೆ ಮಾಡಿದ್ದಾರೆ ಎಂದು ನಾನು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಪ್ರಮಾಣ ಪತ್ರದಲ್ಲಿ ಎದುರುದಾರರು ನನ್ನ ಮಗನಿಗೆ ಸಣ್ಣಪುಟ್ಟ ವಿಚಾರಗಳಿಗೆ ಜಗಳ ಮಾಡಿ ಅನುಮಾನಪಡುತ್ತಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಎದುರುದಾರರು ಶಾಲೆ ಮಕ್ಕಳನ್ನು ಮತ್ತು ಶಾಲಾ ಸಿಬ್ಬಂದಿಗಳನ್ನು ಕರೆದು ವಿಚಾರಿಸುತ್ತಿದ್ದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

4. ಅದೇ ರೀತಿ ನನ್ನ ಪ್ರಮಾಣ ಪತ್ರದಲ್ಲಿ ಎದುರುದಾರರು ರಾತ್ರಿ ಎದ್ದಿರುವುದು, ಹಾಡು ಹೇಳುವುದು, ಜೋರು ದ್ವನಿಯಲ್ಲಿ ಹಾಡುವುದು, ತಡರಾತ್ರಿ ನಿದ್ದೆ ಮಾಡದೇ ಮಾತನಾಡುವುದು, ಮಗನ ಪರ್ಸ್, ಬಟ್ಟೆ ಚೆಕ್ ಮಾಡುವುದು, ರಾತ್ರಿ ಮಿಲನಕ್ಕೆ ಕರೆದರೆ ಬಾರದೇ ಇರುವ ವಿಚಾರ ಎಲ್ಲಾ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಪ್ರಮಾಣ ಪತ್ರದಲ್ಲಿ ಗೂಂಡಾಗಳನ್ನು ಕರೆದುಕೊಂಡು ಬಂದಿದ್ದರು, ಬಾಗಿಲು ಒಡೆಯಲು ಪ್ರಯ್ನುಪಟ್ಟರು, ನನ್ನ ಹೆಂಡತಿಯ ಮಾಂಗಲ್ಯ ಸರ ಕಿತ್ತುಕೊಂಡರು, ನನ್ನ ಮಗನನ್ನು ಕೊಲ್ಲಲು ಪ್ರಯತ್ನಪಟ್ಟರು ಮತ್ತು 25 ಲಕ್ಷಕ್ಕೆ ಬೇಡಿಕೆ ಇಟ್ಟು ಕೊಲೆ ಬೆದರಿಕೆ ಹಾಕಿದರು ಎಂದು ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

5. ಮಾಂಗಲ್ಯ ಸರ ಕಿತ್ತುಕೊಂಡು ಹೋದ ಬಗ್ಗೆ ನೀವು ಪೋಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ದೂರು ಕೊಡಲು ಹೋಗಿದ್ದು, ತೆಗೆದುಕೊಳ್ಳದ ಕಾರಣ ಎಸ್.ಪಿ ರವರಿಗೆ ಪೋಸ್ಟ್ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಪೋಸ್ಟ್ ಮಾಡಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನಾನು ಮಾಂಗಲ್ಯ ಸರ ಕಿತ್ತುಕೊಂಡು ಹೋದ ಬಗ್ಗೆ ಮತ್ತು ದೂರು ಪೋಸ್ಟ್ ಮಾಡಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆ ದಿನ ಪೋಲೀಸ್ ಕನ್ಟ್ರೋಲ್ ರೂಮಿಗೆ ಕರೆ ಮಾಡಿದ್ದು, ಅವರು ಬಂದು ಜಗಳ

ಬಿಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಗೂಂಡಾಗಳು ಬಂದಿದ್ದ ವಿಚಾರಗಳು ಬಿಟ್ಟು ಮತ್ತೆ ಗಲಾಟೆ ಆಯಿತಾ ಎಂದರೆ ಸಾಕ್ಷಿ ಮತ್ತೆ ಲೇಡಿ ಪೋಲೀಸರನ್ನು ಕರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತೆ ದಿಃ 04.06.2017 ರಂದು 6 ರಿಂದ 8 ಗೂಂಡಾಗಳನ್ನು ಕರೆದುಕೊಂಡು ಬಂದಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಎಲ್ಲಾ ಘಟನೆಗಳು ಸಿಸಿಟಿವಿಯಲ್ಲಿ ಸೇರೆ ಆಗಿವೆ ಎಂದು ನಾನು ತಿಳಿಸಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ಎದುರುದಾರರು ನನ್ನ ಮಗನ ಮೇಲೆ ಕೊಳೆ ನೀರು ಎರಚಿದರು ಮತ್ತು ಸೀಮೆ ಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೆದರಿಸಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಮಗ ಸೊಸೆ ಮದುವೆಯಾದ ಮೇಲೆ ಒಂದುವರೆ ತಿಂಗಳು ಮಾತ್ರ ಜೊತೆಯಲ್ಲಿದ್ದರು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ದಿಃ 13.03.2017 ರಂದು ಎದುರುದಾರರೇ ಮನೆ ಬಿಟ್ಟು ಹೋದರು ಎಂದು ತಿಳಿಸಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮಗ ಅವರ ಜೀವನ ಸರಿ ಮಾಡಿಕೊಳ್ಳಲು ಸುಮಾರು ಬಾರಿ ಪ್ರಯತ್ನಪಟ್ಟರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 11.06.2017 ರಂದು ನನ್ನ ಮಗನ ಮೇಲೆ ಸೊಸೆ ಎರಗಿ ಗಲಾಟೆ ಮಾಡಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಎದುರುದಾರರು ನನ್ನ ಮಗನ ಜೊತೆ ಬಂದು ಜೀವನ ನಡೆಸಲು ಸಿದ್ದರಿದ್ದರೂ ನಾವು ಸಪೋರ್ಟ್ ಮಾಡುತ್ತಿಲ್ಲ ಎಂದರೆ ಸಾಕ್ಷಿ ಅದು ಅವರ ಗಂಡ ಹೆಂಡತಿಗೆ ಬಿಟ್ಟಿದ್ದು ಎಂದು ನುಡಿಯುತ್ತಾರೆ. ನಾನು ನನ್ನ ಮಗನ ಮೇಲಿನ ವ್ಯಾಮೋಹದಿಂದ ಸೊಸೆ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಶಿಕಾರಿಪುರ.**